ಹೊಡೆತಕ್ಕೆ ನನ್ನ ಕಿವಿಯೋಲೆ, ಮೂಗುತಿ ಮುರಿದು ಹೋಗಿದ್ದವು. ಕಣ್ಣಿಗೆ ಕತ್ತಲೆ ಕವಿದು ತುಂಬಾ ತೊಂದರೆಪಟ್ಟೆ.

'ಯಾರು ದೊಡ್ಡವರು' ಎಂಬ ನಾಟಕದಲ್ಲಿ ಶ್ರೀಮಂತೆ ಪಾತ್ರಧಾರಿಯಾದ ನಾನು ಬಡವನನ್ನು ಪ್ರೀತಿಸಿದ ಕಾರಣಕ್ಕೆ ತಂದೆ ಪಾತ್ರಧಾರಿ ಹೊಡೆದ ಚಾಟಿ ಏಟಿಗೆ ಕಾಲಿನ ಚರ್ಮ ಕಿತ್ತು, ಹೆಜ್ಜೆ ಎತ್ತಿಡಲು ಆಗದಷ್ಟು ನೋವಾಗಿ ಅತ್ತುಬಿಟ್ಟೆ. ಒಂದು ವಾರ ಕಾಲ ಗಾಯಕ್ಕೆ ಚಿಕಿತ್ಸೆ ಪಡೆದೆ. ಇಷ್ಟೆಲ್ಲಾ ಆದಾಗಲೂ ಅವರು ಬೇಕೆಂತಲೇ ಮಾಡಿದ್ದಲ್ಲ ಎಂಬುದನ್ನು ನಾವು ಅರ್ಥಮಾಡಿಕೊಂಡು ವೈಮನಸ್ಸು ಬೆಳೆಸಿಕೊಳ್ಳಲಿಲ್ಲ. ಹಾಗೆ ಅರ್ಥ ಮಾಡಿಕೊಳ್ಳುತ್ತ ಹೋದ ಕಾರಣಕ್ಕೆ ಹಳ್ಳಿ ಜನ ನನಗೆ ತೀರಾ ಹತ್ತಿರವಾದರು.

ಕೆಲವು ಹಳ್ಳಿಗಳಲ್ಲಿ ನಾಟಕವೆಲ್ಲ ಆದಮೇಲೆ ಸಂಭಾವನೆ ಜಾಸ್ತಿ ಆಯಿತು, ಸ್ವಲ್ಪ ಕಡಿಮೆ ತೆಗೆದುಕೊಳ್ಳಿ ಅಂತ ಗೋಗರೆಯುತ್ತಾರೆ. ಅದು ನಿಜವೇ ಇರಬಹುದು ಎಂದು ಕೊಟ್ಟಷ್ಟು ಪಡೆದೆ. ಕೆಲವು ಕಡೆ ಕೊಡದಿದ್ದರೂ ಬರಿಗೈಯಲ್ಲಿ ಬಂದೆ. ನನ್ನ ಸಹನಟಿಯರಲ್ಲಿ ಹಲವರು ಇಂತಹ ಸೌಜನ್ಯದ ನಡೆ ಉಳಿಸಿಕೊಂಡು ಬಂದಿದ್ದೇವೆ.

ಜಾನಪದ ವಿದ್ವಾಂಸ ಮುದೇನೂರು ಸಂಗಣ್ಣನವರು ನಮ್ಮೂರು ಸಮೀಪದ ಚಿಗಟೇರಿಯವರು. ಅವರ ನಾಟಕಗಳನ್ನು ನಾವು ಆಡಿದ್ದೇವೆ. ನನ್ನ ಪಾಲಿಗೆ ಅವರು ತಂದೆಗಿಂತ ಹೆಚ್ಚಾಗಿದ್ದವರು. ಅವರೊಮ್ಮೆ ನನಗೆ, 'ವೃತ್ತಿ ಗೌರವ ಪಾವಿತ್ರ್ಯಗಳನ್ನು ನಡೆದು ತೋರಿದ ರಂಗಕರ್ಮಿ ಮಗಳೊಬ್ಬಳು ರಂಗಭೂಮಿಯಲ್ಲಿ ಸೈ ಎನಿಸಿಕೊಂಡು ತಂದೆಗೆ ಹಿಗ್ಗು ತಂದಳು' ಎಂದು ಪತ್ರ ಬರೆದರು. ಈ ಪತ್ರ, ಇತರ ಎಲ್ಲ ಪ್ರಶಸ್ತಿಗಳಿಗಿಂತ ಮಿಗಿಲಾದ ಪ್ರಮಾಣ ಪತ್ರ. ಈಗಲೂ ಜೋಪಾನವಾಗಿ ಇಟ್ಟುಕೊಂಡಿದ್ದೇನೆ.

**◆ ನೀವು ವರ್ಷಪೂರ್ತಿ ನಟನೆಗಾಗಿ ಮನೆಯಾಚೆಯೇ ಹೊರಗಿದ್ದವರು. ಕುಟುಂಬಕ್ಕಿಂತ ರಂಗಭೂಮಿ ದೊಡ್ಡದು ಎನ್ನುವಿರಿ. ಗೃಹಿಣಿಯಾಗಿ ಕುಟುಂಬವನ್ನೂ ನಿಭಾಯಿಸಬೇಕು. ಕಲಾವಿದೆಯಾಗಿದ್ದರಿಂದ ನಿಮ್ಮ ಕುಟುಂಬದ ಮೇಲಾದ ಪರಿಣಾಮವೇನು ?**

ನಮ್ಮ ಕುಟುಂಬದ ಸದಸ್ಯರು ಹೊಟ್ಟೆತುಂಬಾ ಊಟ ಮಾಡಿದ್ದೇ ನಾಟಕದ ಸಂಭಾವನೆಯಿಂದ. ಮೈತುಂಬಾ ಹೊಸ ಬಟ್ಟೆ ಧರಿಸಿಕೊಂಡು ಹಬ್ಬ-ಹರಿದಿನಗಳನ್ನು ಸಂತೋಷದಿಂದ ಕಳೆದದ್ದು ಈ ನಾಟಕದಿಂದ. ಇಲ್ಲಿ ದುಡಿದ ಹಣದಿಂದ ತಂಗಿಯರ ಮದುವೆ ಮಾಡಿದೆ. ಅವರೆಲ್ಲ ಈಗ ನೆಮ್ಮದಿಯಿಂದಿದ್ದಾರೆ. ಅವರಲ್ಲಿ ಹಲವರು ಒಳ್ಳೆಯ ಶಿಕ್ಷಣ ಪಡೆದಿದ್ದಾರೆ. ನನ್ನ ದೊಡ್ಡಮ್ಮ ದೊಡ್ಡ ರಂಗ ಕಲಾವಿದೆಯೆಂದು ಅವರ ಮಕ್ಕಳು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನನ್ನ ತಮ್ಮನ ಮಕ್ಕಳೂ ನನಗೆ ಸಹಕಾರಿಯಾಗಿದ್ದರು. ಮದುವೆಯಾದ ಮೇಲೆಯೂ ನನ್ನಿಂದ ದೂರಾಗಲಿಲ್ಲ. ಈ 74ರ ವಯೋಮಾನದಲ್ಲಿಯೂ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಜೀವನಕ್ಕೆ ಆಸರೆಯಾಗಿದ್ದಾರೆ. ತಂಗಿಯರ ಕುಟುಂಬದವರಿಂದಲೂ ಗೌರವವಿದೆ. ನನ್ನ ಮರಿಯಮ್ಮನಹಳ್ಳಿ ಬಳಗ ಹಾಗೂ ಕಲಾಲೋಕವು, ನಾನು ನೆಮ್ಮದಿಯಿಂದ ಇರುವಂತೆ ನೋಡಿಕೊಳ್ಳುತ್ತಿದೆ. ಒಂದು ಕಾಲದಲ್ಲಿ ನಾನು ಹುಟ್ಟಿದ ಸೂರ್ಯನನ್ನು ನೋಡಲಾಗದ ದಿನಗಳಿದ್ದವು. ಈಗ ಪ್ರತಿದಿನ ಬೆಳಕಿನ ಭಾಗ್ಯ ಪಡೆದಿರುವೆ. ಕತ್ತಲೆಯ ರಾತ್ರಿಗಳಲ್ಲಿ ಝಗಮಗಿಸುವ ಲೈಟಿನ ಬೆಳಕಿನಲ್ಲಿ ಬಣ್ಣ ಹಚ್ಚಿ ನಾಟಕವಾಡಿದೆ. ಈ ನಾಟಕದವಳ ಕುಟುಂಬವನ್ನು, ನನ್ನನ್ನೂ ಸಾಕಿದ್ದು ಈ ರಂಗ ಕುಟುಂಬ. ಮನೆಯವರೆಲ್ಲ ಸೇರಿ ನನ್ನ ಮಕ್ಕಳನ್ನು, ನನ್ನನ್ನು ಬೆಳೆಸಿದರು. ಅರ್ಥ ಮಾಡಿಕೊಂಡಿರುವ ಕುಟುಂಬದ ಎಲ್ಲಾ ಸದಸ್ಯರು ನನಗೆ ಬೆಂಗಾವಲಾಗಿ ನಿಂತು, ನನ್ನನ್ನು ಸಂಪೂರ್ಣವಾಗಿ ರಂಗಭೂಮಿಗೆ ಸಮರ್ಪಿಸಿಕೊಳ್ಳಲು ನೆರವಾದರು. ಈ ಸಹಕಾರ ಎಲ್ಲಾ ಕಲಾವಿದೆಯರಿಗೂ ದೊರಕದು. ರಂಗಕಲಾವಿದೆಯರನ್ನು ಅವರವರ ಕುಟುಂಬವೇ ಅರ್ಥ ಮಾಡಿಕೊಳ್ಳಬೇಕು. ನನಗೆ ಲಭಿಸಿದ್ದು ಎಲ್ಲರಿಗೂ ಲಭಿಸಬೇಕು. ಮನೆ ಗೆದ್ದು ಮಾರುಗೆಲ್ಲಬೇಕು. ಈ ರಂಗಭೂಮಿಯಲ್ಲಿ ಗೆಲ್ಲಬೇಕೆಂದರೆ ಮನೆಯವರನ್ನು ಮೊದಲು ನಾವು ಗೆಲ್ಲಬೇಕು.

**◆ ನಾಟಕವೇ ಬೇರೆ..! ಜೀವನವೇ ಬೇರೆ..! ಆದರೂ ಜೀವನವೇ ಒಂದು ನಾಟಕವೇ? ಅಥವಾ ನಾಟಕವೇ ಜೀವನವೇ? ನಿಮ್ಮ ಆಯ್ಕೆಯೇನು? ನಾಟಕ ಜೀವನಕ್ಕೆ ಜೀವನ ನಾಟಕಕ್ಕೆ ಪೂರಕವಾದ ಬಗೆ ಹೇಗೆಂದು ತಿಳಿಸುವಿರಾ?**

ನಾಟಕವೇ ಬೇರೆ, ಜೀವನವೇ ಬೇರೆ